ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ತೆಗೆದುಕೊಂಡಿರುವ ಕೆಲಸಗಳು.

1943. ಶ್ರೀ ಶಿವಾನಂದ ಪೆಜ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವ್ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳು ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಸೇರಿರುತ್ತವೆ?

ಆ) 1991-92ರಲ್ಲಿ ಬೆಳಗಾವ್ ಜಿಲ್ಲೆಗೆ ಮಲೆನಾಡ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು? (ತಾಲ್ಲೂಕುವಾರು ವಿವರ ಕೊಡುವುದು)

ಇ) ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕುಗಳಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ? (ಕೆಲಸದ ವಿವರ ಮತ್ತು ಡಿಸಂಬರ್ 31ರ ವರೆಗೆ ಎಷ್ಟು ಹಣ ಇವುಗಳಿಗೆ ಬಿಡುಗಡೆ ಮಾಡಲಾಗಿದೆ ಹಾಗೂ ಖರ್ಚಾದ ಹಣವೆಷ್ಟು?)

ಈ) ಈ ಕೆಲಸಗಳನ್ನು ಯಾವ ಯಾವ ಇಲಾಖೆಯವರು ನಿರ್ವಹಿಸುವರು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ. ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ) ಬೆಳಗಾವ್ ಜಿಲ್ಲೆಯ ಖಾನಾಪುರ. ಹುಕ್ಕೇರಿ. ಮತ್ತು ಬೆಳಗಾಂ. ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳು ಸೇರಿವೆ.

ಆ) ಈ ಯೋಜನೆಯಡಿಯಲ್ಲಿ ಯಾವ ಜಿಲ್ಲೆಗೂ ಹಣವನ್ನು ಬಿಡುಗಡೆ ಮಾಡಿಲ್ಲ.

ಇ) ಇನ್ನೂ ಯಾವ ಕೆಲಸವನ್ನೂ ತೆಗೆದುಕೊಂಡಿಲ್ಲ.

ಈ) ಉತ್ತರ (ಇ) ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಳಗಾವ್ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಕುಡಿಯುವ ನೀರಿನ ತೊಂದರೆ.

1944. ಶ್ರೀ ಶಿವಾನಂದ ಪೆಜ್. ಕೌಜಲಗಿ (ಬೈಲಹೊಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರ ಬಡಾವಣೆಯಲ್ಲಿ ಕುಡಿಯುವ ನೀರಿನ ತೊಂದರೆಯಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರದವರು ತಕ್ಷಣ 20 ಕೊಳವೆ ಬಾವಿಗಳನ್ನು ತೋಡಿಸಲು ಕ್ರಮ ಕೈಗೊಳ್ಳುವರೆ?

ಇ) ನೀರಿನ ತೊಂದರೆಯಿಂದ ಸಾರ್ವಜನಿಕರು ಮೇಲಿಂದ ಮೇಲೆ ಉನ್ನತಾಧಿಕಾರಿಗಳಿಗೆ ಮನವಿ ಮಾಡಿಕೊಂಡರೂ ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಳ್ಳದೇಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈಗಲಾದರೂ ಸರ್ಕಾರದವರು ಕೊಳವೆ ಬಾವಿಗಳನ್ನು ತೋಡಿಸಲು ಕ್ರಮ ಕೈಗೊಳ್ಳುವರೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಮೇ 1991ರಲ್ಲಿ 4 ಕೊಳವೆ ಬಾವಿಗಳನ್ನು ತೋಡಲಾಗಿದೆ. 3 ಹೆಚ್ಚು ಇಳುವರಿ ಇರುತ್ತವೆ. ಈ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪು ಹಾಗೂ ಪೈಪ್ ಲೈನ್ ಹಾಕಲು ಜಿಲ್ಲಾಧಿಕಾರಿ. ಬೆಳಗಾವಿಯವರು 3.63 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಅವಶ್ಯಕತೆ ಬಂದರೆ ಇನ್ನೂ ಹೆಚ್ಚು ಕೊಳವೆ ಬಾವಿಗಳನ್ನು ತೋಡಲಾಗುವುದು.

ಇ) ಸಾರ್ವಜನಿಕ ಮತ್ತು ಸ್ಥಳೀಯ ಶಾಸಕರ ವಿನಂತಿಯ ಮೇರೆಗೆ ಹಾಗೂ ಜಿಲ್ಲಾಧಿಕಾರಿ ಬೆಳಗಾವಿಯವರ ಆದೇಶದ ಪ್ರಕಾರ ಬರಪರಿಹಾರ ನಿಧಿಯಿಂದ 4 ಕೊಳವೆ ಬಾವಿಗಳನ್ನು ತೋಡಲಾಗಿದೆ. ಇವುಗಳಿಗೆ ವಿದ್ಯುತ್ ಪಂಪುಗಳನ್ನು ಅಳವಡಿಸಲು ಜಿಲ್ಲಾಧಿಕಾರಿ. ಬೆಳಗಾವಿಯವರು 3.63 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು. ಈ ಕೆಲಸವು ಪ್ರಗತಿಯಲ್ಲಿದೆ.

ಈ) ಉದ್ಭವಿಸುವುದಿಲ್ಲ.

RECRUITMENT OF K.A.S. OFFICERS

1760. SRI SADATH ALI KHAN (Channapatna) : Will the Chief Minister be pleased to state :–

a) the number of KAS Class-I and Class-II Officers recruited by the K.P.S.C. during the last five years i.e. 1987 to 1991 (Details of posts and Departments be furnished);

b) out of which number of officers belonging to SC/ST and Backward Classes;

c) the number of officers belonging to minorities like Mus'ims and christians recruited and their percentage;

d) whether it has come to notice of Government that there is no proper representation of Minorities like Muslims and christians in recruitment;

e) if so, the reasons for the same and the steps taken to provided proper representation to these communities?

SRI S. BANGARAPPA (Chief Minister) :

a) Number of officers recruited through the Karnataka Public Service Commission to K.A.S. Class & II posts during 1987-91 is as follows:-